ದಿನಾಂಕ 18-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಐ.ಎಂ.ಕೆ ವಕೀಲರಿಂದಃ</u>**

1. ನಾನು ನೀಡಿದ ಮಾಹಿತಿಯಂತೆ ಮುಖ್ಯ ವಿಚಾರಣಾ ಪತ್ರದ ಸಂಗತಿಗಳನ್ನು ಬರೆಯಲಾಗಿದೆ. ಸದರಿ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಈ ದಾವೆಯನ್ನು ಫರೀದಾಬಿ ಅವರು ಮಹಮ್ಮದ ಗೌಸ ಅವರ ವಿರುದ್ದ ಸಲ್ಲಿಸಿದ್ದಾರೆ. ಆಸ್ತಿಯ ಜಾಗವು ಬೇಕೆಂದು ದಾವೆಯನ್ನು ಸಲ್ಲಿಸಲಾಗಿದೆ. ದಾವಾ ಆಸ್ತಿಯ ಸಂಖ್ಯೆ ಗೊತ್ತಿಲ್ಲ. ಅದರ ವಿಸ್ತೀರ್ಣ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಸರಕಾರಿ ರಸ್ತೆ, ಪಶ್ಚಿಮಕ್ಕೆ ಗೌಸಮೊದ್ದೀನ ಅವರ ಆಸ್ತಿ, ಉತ್ತರಕ್ಕೆ ಮಹಮ್ಮದ ಇಸೂಫ ಅವರ ಆಸ್ತಿ ಮತ್ತು ದಕ್ಷಿಣಕ್ಕೆ ಸರಕಾರಿ ರಸ್ತೆ ಇದೆ.

2. ನನ್ನ ತಂದೆ 37 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನನ್ನ ತಂದೆಯ ಮರಣದ ನಂತರ ವಾದಿಯು ಕಲಕೊಪ್ಪ ಗ್ರಾಮದಲ್ಲಿ ವಾಸವಿದ್ದಳು ಎಂದರೆ ಸಾಕ್ಷಿಯು ಹಾನಗಲ್ಲನ ದರ್ಗಾ ಓಣಿಯಲ್ಲಿ ವಾಸವಿದ್ದಳು ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳ ಕಾಲ ಹಾನಗಲ್ಲನಲ್ಲಿ ವಾಸವಿದ್ದರು ಎಂದು ನಾನು ಚಿಕ್ಕವಳು ಇದ್ದರಿಂದ ಗೊತ್ತಿಲ್ಲ. ಆಸ್ತಿಗಳನ್ನು ಹಿಸ್ಸೆಯಲ್ಲಿ ನನ್ನ ತಾಯಿಗೆ ಕೊಟ್ಟಿರುತ್ತಾರೆ. ನಾನು ಕಲಕೊಪ್ಪ ಗ್ರಾವುದಲ್ಲಿ ವಾಸವಿದ್ದೇನೆ ಎಂದರೆ ಸಾಕ್ಷಿಯು ಗಂಡನ ಮನೆಯಲ್ಲಿ ವಾಸವಿದ್ದೇನೆ ಎಂದು ನುಡಿಯುತ್ತಾರೆ. ವಾದಿಯು ನನ್ನೊಂದಿಗೆ ವಾಸವಿದ್ದಾಳೆ. ಕಲಕೊಪ್ಪ ಗ್ರಾಮದಲ್ಲಿ ವಾದಿಯ ಸಹೋದರರು ಇದ್ದಾರೆ ಎಂದರೆ ಸರಿ. ಅವರು ಬಡವರು ಎಂದರೆ ಸರಿ. ವಾದಿಗೆ ಆಕೆಯ ಸಹೋದರರು ಕಲಕೊಪ್ಪ ಗ್ರಾಮದಲ್ಲಿ ಮನೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಕಲಕೊಪ್ಪ ಗ್ರಾಮದಲ್ಲಿಯೇ ಮನೆ ಮಾಡಿಕೊಟ್ಟಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .



(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ

ದಿನಾಂಕ 18-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಐ.ಎಂ.ಕೆ ವಕೀಲರಿಂದಃ**

1. ನಾನು ವಾಸಿಸುವ ಓಣಿಯಲ್ಲಿರುವ ಪಂಚ ಕಮೀಟಿಯ ಸದಸ್ಯನು ಇರುವುದಿಲ್ಲ. ನಿಯಾಜ್ ಸರ್ವಿಕೇರಿ ಎಂಬುವವರು ಪಂಚ ಕಮೀಟಿಯ ಸದಸ್ಯ ಎಂದರೆ ಸರಿ. ಅವರು ಬಹಳ ವರ್ಷಗಳಿಂದ ಪಂಚ ಕಮೀಟಿಯ ಸದಸ್ಯರು ಎಂದರೆ ಗೊತ್ತಿಲ್ಲ. ಆತ ಹಿರಿಯ ವ್ಯಕ್ತಿ ಎಂದರೆ ಗೊತ್ತಿಲ್ಲ. ಶಫಿ ಚಿಕ್ಕೇರಿ ಈತನು ಅಹ ಪಂಚ ಕಮೀಟಿಯ ಸದಸ್ಯ ಎಂದರೆ ಸರಿಯಲ್ಲ. ಹಾನಗಲ್ಲನ ದರ್ಗಾ ಓಣಿಯಲ್ಲಿ ಮುಸ್ಲಿಂ ರ ಎರಡು ಪಂಚ ಕಮೀಟಿಗಳು ಇವೆ ಎಂದರೆ ಸರಿ. ಮೊದಲಿಗೆ ಒಂದು ಪಂಚ ಕಮೀಟಿ ಮಾತ್ರ ಇದ್ದು , ಆ ಕಮೀಟಿಗೆ ಶಫಿ ಚಿಕ್ಕೇರಿ ಸದಸ್ಯ ಇದ್ದಾರೆ ಎಂದರೆ ಗೊತ್ತಿಲ್ಲ. ಆ ಸಂಗತಿ ತಿಳಿದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಮ್ಮ ಓಣಿಯಲ್ಲಿ ಆಗುವ ಮುಸಲ್ಮಾನರ ಧಾರ್ಮಿಕ ಕೆಲಸಗಳನ್ನು ಸದರಿ ಕಮೀಟಿಯ ಸದಸ್ಯರು ಮುಂದಾಳತ್ವ ವಹಿಸಿ ಮಾಡುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳಾದ ಮದುವೆ, ಮುಂಜಿ, ಭಕ್ಷೀಷ , ಬಿಸ್ಮಿಲ್ಲಾ ಆದಾಗ ಪಂಚ ಕಮೀಟಿಯ ಸದಸ್ಯರು ಬಂದ ನೆರವೇರಿಸುತ್ತಾರೆ ಎಂದರೆ ಸಾಕ್ಷಿಯು ಬಿಸ್ಮಿಲ್ಲಾ ಕಾರ್ಯಕ್ರಮ ಹೊರತುಪಡಿಸಿಉಳಿದ ಕಾರ್ಯಕ್ರಮಗಳನ್ನು ಪಂಚ ಕಮೀಟಿಯವರು ನೆರವೇರಿಸುತ್ತಾರೆ ಎಂದು ನುಡಿಯುತ್ತಾರೆ. ನನಗೆ ಮೂರು ಜನ ಸಹೋದರರು. ಗುಡುಮಿಯಾ ಹಾನಗಲ್ಲ ಅವರು ನನ್ನ ಖಾಸಾ ಸಹೋದರ ಎಂದರೆ ಸರಿ. ನಾನು ಮತ್ತು ಗುಡುಮಿಯಾ ಅವರು ಪ್ರತ್ಯೇಕವಾಗಿ ವಾಸವಿದ್ದೇವೆ ಎಂದರೆ ಸರಿ. ನನ್ನ ಉಳಿದ ಇಬ್ಬರು ಸಹೋದರರು ಸಹ ಪ್ರತ್ಯೇಕವಾಗಿ ವಾಸವಿದ್ದರು. ನಾನು ಮತ್ತು ನನ್ನ ಸಹೋದರರು ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಈಗಾಗಲೇ ನನ್ನ ಮತ್ತು ಸಹೋದರರ ನಡುವೆ ವಿಭಾಗ ಆಗಿರುತ್ತದೆ. ವಿಭಾಗ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.



ಪ್ರತಿವಾದಿಗೆ ಕುಟುಂಬದ ಆಸ್ತಿಗಳಿಗೆ ಹಿಸ್ಸೆಯನ್ನು ನೀಡಬೇಕಾಗುತ್ತದೆ ಎಂದು ತಿಳಿದು, ಈಗಾಗಲೇ ಹಿಸ್ಸೆ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಗುಡೂಮಿಯಾ ಹಾನಗಲ್ಲ ಅವರು ಸುಮಾರು 40 ವರ್ಷಗಳಿಂದ ಹಿಂದೆ ಮರಣ

ಹೊಂದಿರುತ್ತಾರೆ. ಆತನ ಜೀವಿತಾವಧಿಯಲ್ಲಿ ನನ್ನ ಮತ್ತು ಆತನ ನಡುವೆ ಉತ್ತಮ ಬಾಂಧವ್ಯ ಇರದೇ ಇರುವುದರಿಂದ ಪ್ರತ್ಯೇಕವಾಗಿ ವಾಸವಿದ್ದೇವೆ ಎಂದರೆ ಸರಿ. ಸದರಿ ಗುಡುಮಿಯಾ ರವರ ಮರಣ ನಂತರ ಆಸ್ತಿಗಳನ್ನು ವಾದಿ ಮತ್ತು ಪ್ರತಿವಾದಿಯ ನಡುವೆ ಪಂಚ ಕಮೀಟಿಯವರು ವಿಭಾಗ ಮಾಡಿಕೊಟ್ಟಿದ್ದರು ಎಂದರೆ ಸರಿ. ಸದರಿ ವಿಭಾಗದಂತೆ ಮನೆಯ ಆಸ್ತಿಗಳನ್ನು ವಾದಿಗೆ ಮತ್ತು ಜಮೀನುಗಳನ್ನು ಪ್ರತಿವಾದಿಗೆ ನೀಡಲಾಗಿತ್ತು ಎಂದರೆ ಸರಿ. ವಾದಿಯು ತನಗೆ ಬಂದ ಹಿಸ್ಸೆಯ ಮನೆಯಲ್ಲಿ ಅರ್ಧ ಭಾಗವನ್ನು 1989 ರಲ್ಲಿ ಪ್ರತಿವಾದಿಗೆ ಮಾರಾಟ ಮಾಡಿದ್ದಳು ಎಂದರೆ ಗೊತ್ತಿಲ್ಲ. ಸದರಿ ಮಾರಾಟ ಮಾಡಿದ ಆಸ್ತಿ ನಂ. 4084/2 ಎಂದರೆ ಗೊತ್ತಿಲ್ಲ. ಸದರಿ ಮಾರಾಟ ಆಸ್ತಿಯನ್ನು ಮಾರಾಟ ಮಾಡಿದ ನಂತರ ವಾದಿಯು ತವರೂರಾದ ಕಲಕೊಪ್ಪ ಗ್ರಾಮದಲ್ಲಿ ವಾಸವಿದ್ದಳು ಎಂದರೆ ಸಾಕ್ಷಿಯು ಅಲ್ಲೂ 4 ದಿನ ಮತ್ತು ಹಾನಗಲ್ಲನಲ್ಲಿ 4 ದಿನ ವಾಸವಿದ್ದರು ಎಂದರೆ ನುಡಿಯುತ್ತಾರೆ. ಅರ್ಧ ಭಾಗವನ್ನು ಮಾರಾಟ ಮಾಡಿ ಉಳಿದ ಅರ್ಧ ಭಾಗವನ್ನು ವಾದಿಯು ಪ್ರತಿವಾದಿಗೆ ಭಕ್ಷೀಷ ಮಾಡಿದ್ದಳು ಎಂದರೆ ಸರಿಯಲ್ಲ. ಸದರಿ ಭಕ್ಷೀಷನ ಸಂಗತಿ ನನಗೆ ತಿಳಿದಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸದರಿ ಭಕ್ಷೀಷನ ಕಾರ್ಯಕ್ರಮದಲ್ಲಿ ನಿಯಾಜ್ ಸರ್ವಿಕೇರಿ ಮತ್ತು ಶಫಿ ಚಿಕ್ಕೇರಿ ಅವರು ಭಾಗವಹಿಸಿ ಮಾಡಿಸಿದ್ದರು ಎಂದರೆ ಸರಿಯಲ್ಲ. ವಾದಿಯ ಮಗಳಾದ ಹಸೀನಾಬಿ ಮದುವೆ ಯಾವಾಗ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಆ ಮದುವೆಯಲ್ಲಿ ನಾನು ಭಾಗವಹಿಸಿರಲಿಲ್ಲ ಎಂದರೆ ಸರಿ. ಆಕೆಯ ಮದುವೆಯ ಖರ್ಚು ವೆಚ್ಚವನ್ನು ವಾದಿಯೇ ಮಾಡಿರುತ್ತಾಳೆ. ಆಕೆಯ ಮದುವೆಯ ವೆಚ್ಚವನ್ನು ಪ್ರತಿವಾದಿಯು ಸಹ ನೀಡಿರುತ್ತಾನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ವಾದಿ ಮತ್ತು ಪ್ರತಿವಾದಿಯರು ಭಾಂದವ್ಯ ಚೆನ್ನಾಗಿತ್ತು ಎಂದರೆ ಸರಿ. ಮಗಳ ಮದುವೆಗೆ ಖರ್ಚನ್ನು ನೀಡಿರುತ್ತಾನೆ ಎಂದು ವಾದಿಯು ದಾವಾ ಆಸ್ತಿಯನ್ನು ಪ್ರತಿವಾದಿಗೆ ಪ್ರೀತಿಯಿಂದ ಭಕ್ಷೀಷ



ನೀಡಿರುತ್ತಾಳೆ ಎಂದರೆ ಸರಿಯಲ್ಲ. ಪ್ರತಿವಾದಿಯು ವಾದಿಗೆ ಗೋವಾದಿಂದ ಆಗಾಗ್ಗೆ ಬಂದಾಗ ಹಣಕಾಸಿನ ಸಹಾಯ ಮಾಡುತ್ತಿದ್ದನು ಎಂದರೆ ಗೊತ್ತಿಲ್ಲ. ವಾದಿಗೆ ಯಾವುದೇ ರೀತಿಯ ಹಣಕಾಸಿನ ಸಮಸ್ಯೆ ಇರಲಿಲ್ಲ ಎಂದರೆ ಗೊತ್ತಿಲ್ಲ.

5. ಹಿಸ್ಸೆಯ ಪ್ರಕಾರ ದಾವಾ ಆಸ್ತಿಯು ವಾದಿಗೆ ಬಂದಾಗ ಅದರ ಖಾತೆಯು ವಾದಿಯ ಹೆಸರಿಗೆ ಬದಲಾಗಿತ್ತು ಎಂದರೆ ಸರಿಯಲ್ಲ. 2014 ರಲ್ಲಿ ಭಕ್ಷೀಷ ಸ್ವೀಕರಿಸಿದ ನಂತರ ಪ್ರತಿವಾದಿಯು ದಾವಾ ಆಸ್ತಿಯ ಖಾತೆಯನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. 2014 ರಿಂದಲೂ ದಾವಾ ಆಸ್ತಿಯ ಕರವನ್ನು ಪ್ರತಿವಾದಿಯೇ ಪಾವತಿ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ.

ಈ ದಾವೆಯನ್ನು ಫರೀದಾಬಿಯವರು ಮಹಮ್ಮಗೌಸ ಅವರ ವಿರುದ್ದ ಸಲ್ಲಿಸಿದ್ದಾರೆ. ನಾನು ಹಾಜರು ಪಡಿಸಿದ ಮುಖ್ಯ ವಿಚಾರಣೆ ಪತ್ರಕ್ಕೆ ಮಾಹಿತಿ ನೀಡಿರುವುದಿಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳ ಬಗ್ಗೆ ಸ್ವಲ್ಪವು ಗೊತ್ತಿಲ್ಲ. ಭಕ್ಷೀಷ ಪತ್ರವನ್ನು ಮೋಸದಿಂದ ಬರೆಸಿಕೊಂಡಿರುತ್ತಾರೆ ಎಂದು ನಾನು ವಿದ್ಯಾಭ್ಯಾಸ ಮಾಡದೇ ಇರುವುದರಿಂದ ಹೇಳಲು ಆಗುವುದಿಲ್ಲ. ಮುಖ್ಯ ವಿಚಾರಣಾ ಪತ್ರದ 4 ನೇ ಪ್ಯಾರಾದಲ್ಲಿ ದಿಃ 22-02-2014 ರಂದು ಭಕ್ಷೀಷ ಪತ್ರವನ್ನು ಪ್ರತಿವಾದಿಯು ಮೋಸದಿಂದ ವಾದಿಗೆ ನಂಬಿಕೆ ಹುಟ್ಟಿಸಿ ಮಾಡಿಕೊಂಡ ದಸ್ತಾವೇಜು ಆಗಿರುತ್ತದೆ ಎಂದು ನಾನು ಬರೆಸಿರುವುದಿಲ್ಲ.

6. ವಾದಿಗೆ ಹಣಕಾಸಿನ ಸಮಸ್ಯೆ ಇದ್ದ ಬಗ್ಗೆ ನನಗೆ ಗೊತ್ತಿದ್ದು ಆದರೆ ಯಾವ ವರ್ಷ ಎಂದು ನಿಖರವಾಗಿ ಗೊತ್ತಿಲ್ಲ. ವಾದಿಗೆ ಸಂಪೂರ್ಣ ದೇಖರಿಕೆಯನ್ನು ಪ್ರತಿವಾದಿಯೇ ಮಾಡುತ್ತಿದ್ದು, ಆ ಕಾರಣಕ್ಕೆ ವಾದಿಗೆ ಯಾವುದೇ ಹಣಕಾಸಿನ ಸಮಸ್ಯೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ವಾಸ ಮಾಡುವ ಹಾಗೂ ದಾವಾ ಆಸ್ತಿಯ ಸುತ್ತಮುತ್ತ ಇರುವ ಆಸ್ತಿಗಳ ಮೌಲ್ಯ ನನಗೆ ನೆನಪಿಲ್ಲ. 2014 ರಲ್ಲಿ ದಾವಾ ಆಸ್ತಿಯ ಮೌಲ್ಯವು 2-3 ಲಕ್ಷ್ಯ ಇತ್ತು ಎಂದರೆ ಸರಿ. 2017 ರಲ್ಲಿ ದಾವಾ ಆಸ್ತಿಯ ಮೌಲ್ಯವು 7 ಲಕ್ಷ್ಯಕ್ಕೆ ಏರಿಕೆಯಾಗಿರುತ್ತದೆ ಎಂದರೆ ಗೊತ್ತಿಲ್ಲ. ಪ್ರಸ್ತುತ ದಾವಾ ಆಸ್ತಿಯ ಮೌಲ್ಯ ಎಷ್ಟು ಇದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ಅದರ ಸಂಖ್ಯೆ ಗೊತ್ತಿಲ್ಲ.



ದಾವಾ ಆಸ್ತಿಯ ವಿಸ್ತೀರ್ಣ ಸುಮಾರು 3 ಗುಂಟೆ ಇದೆ. ದಾವಾ ಆಸ್ತಿಯಪೂರ್ವಕ್ಕೆ ಮುಖ್ಯ ರಸ್ತೆ , ಪಶ್ಚಿಮಕ್ಕೆ ಗೌಸಮೋದ್ದೀನ , ಉತ್ತರಕ್ಕೆ ಗೌಸಮೋದ್ದೀನ ಆಲೂರ ಮತ್ತು ದಕ್ಷಿಣಕ್ಕೆ ಅತ್ತಾರ ಅವರ ಮನೆ ಇದೆ. 2014 ರಲ್ಲಿ ಭಕ್ಷೀಷ ಆದ ನಂತರ ಪ್ರತಿವಾದಿಯು ದಾವಾ ಆಸ್ತಿಯಲ್ಲಿದ್ದ ಮನೆಯನ್ನು ತೆಗೆಸಿ ಖಾಲಿ ಜಾಗ ಮಾಡಿರುತ್ತಾನೆ ಎಂದರೆ ಸಾಕ್ಷಿ ಅರ್ಧ ಮನೆಯನ್ನು ತೆಗೆದಿರುತ್ತಾನೆ ಎಂದು ನುಡಿಯುತ್ತಾರೆ. ಉಳಿಕೆಯ ಅರ್ಧ ಮನೆಯು ವಾದಿಯ ಸ್ವಾಧೀನದಲ್ಲಿದೆ. ದಾವಾ ಆಸ್ತಿಯ ಯಾವುದೇ ಭಾಗವು ವಾದಿಯ ಸ್ವಾಧೀನದಲ್ಲಿ ಇರದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ವಾದಿಗೆ ಸಂಬಂಧಿಸಿದ ಆಧಾರಕಾರ್ಡ, ಪಡಿತರ ಚೀಟಿ ಮತ್ತು ಚುಣಾವಣೆ ಗುರುತಿನ ಚೀಟಿ ನೋಡಿರುವುದಿಲ್ಲ. ಸದರಿ ದಾಖಲೆಗಳಲ್ಲಿ ವಾದಿಯ ವಿಳಾಸವು ಕಲಕೊಪ್ಪ ಗ್ರಾಮಕ್ಕೆ ಸಂಬಂಧಿಸಿದಂತೆ ಇದೆ ಎಂದರೆ ಸಾಕ್ಷಿ ಹಾನಗಲ್ಲ ಗ್ರಾಮಕ್ಕೆ ಸಂಬಂಧಿಸಿದಂತೆ ಇವೆ ಎಂದು

ನುಡಿಯುತ್ತಾರೆ. ವಾದಿಯ ವಿಳಾಸವು ಕಲಕೊಪ್ಪ ಗ್ರಾಮಕ್ಕೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸಂಬಂಧಿಸಿದ ವಿಳಾಸದ ದಾಖಲೆಗಳು ಹಾನಗಲ್ಲನಲ್ಲಿ ಇಲ್ಲದೇಇರುವುದರಿಂದ, ಆಕೆಗೆ ಬ್ಯಾಂಕಿನವರು ಸಾಲವನ್ನು ಮಂಜೂರು ಮಾಡುವ ಪ್ರಶ್ನೆಯೇ ಇಲ್ಲ ಎಂದರೆ ಸರಿಯಲ್ಲ.

8. ವಾದಿಯ ಮಗಳು ಉರ್ದು ಶಾಲೆಯಲ್ಲಿ ವಿಧ್ಯಾಭ್ಯಾಸ ಮಾಡುತ್ತಾಳೆ ಎಂದರೆ ಸಾಕ್ಷಿಯು 2 ನೇ ತರಗತಿಯವರೆಗೆ ಮಾತ್ರ ವಿಧ್ಯಾಭ್ಯಾಸ ಮಾಡಿರುತ್ತಾಳೆ ಎಂದು ನುಡಿಯುತ್ತಾರೆ. ಆಕೆಗೆ ಉರ್ದು ಭಾಷೆ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿಯಲ್ಲ. ವಾದಿಯ ಮಗಳು ಉರ್ದು ಭಾಷೆಯಲ್ಲಿ ಸಹಿ ಮಾಡುತ್ತಾಳೆ ಎಂದರೆ ಸಾಕ್ಷಿ ಹಬ್ಬೆಟ್ಟಿನ ಗುರುತಿನ ಸಹಿ ಮಾಡುತ್ತಾಳೆ ಎಂದು ನುಡಿಯುತ್ತಾರೆ. ಆಕೆಗೆ ಸಹಿ ಮಾಡಲು ಬಂದರೂ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ದಾವಾ ಕಾರಣಗಳು ಇರದೇ ಇದ್ದರೂ ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲಃ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ